ಸೇರಿ ಡಾಲರ್‌ಗಳನ್ನು ತಂದುಕೊಡಬೇಕಿತ್ತು. ಕೆಮಿಕಲ್ ಇಂಜಿನಿಯರಿಂಗ್‌ನವರಿಗೆ ಕ್ಯಾಂಪಸ್ ಸೆಲೆಕ್ಷನ್ ಇರೋದಿಲ್ಲ ಎಂಬುದೇನೂ ಅವರಿಗೆ ಮುಖ್ಯವಲ್ಲ. ನನ್ನ ಮಗ ಇಂತಹ ದೇಶದಲ್ಲಿದ್ದಾನೆ ಎಂದು ಹೆಮ್ಮೆಪಡಲೂ ಆಗದ ದುಸ್ಥಿತಿ ಅವರದ್ದು!

ಅವರ ಆ ಸ್ಥಿತಿಯನ್ನು ಸುಧಾರಿಸಲೆಂದೇ ನಾಟ್ಟಿಂಗ್‌ಹ್ಯಾಮ್‌ಗೆ ಬಂದಿದ್ದ ಶ್ರೀನಿಧಿ. ಸ್ಕಾಲರ್‌ಶಿಪ್ ನಲ್ಲಿ ಆಯ್ಕೆ ಆದ್ದರಿಂದ ವಿದ್ಯಾಭ್ಯಾಸದ ಖರ್ಚಿರಲಿಲ್ಲ. ಹಾಸ್ಟೆಲ್ ಫ್ರೀ ಇದ್ದರೂ ಮೆಸ್ ಬಿಲ್ ಕಟ್ಟಲೇ ಬೇಕಿತ್ತು. ಇಂಗ್ಲೆಂಡ್‌ನ ಊಟ ಹಿಡಿಸದೇ ಸ್ವತಃ ಅಡುಗೆ ಮಾಡಿಕೊಂಡರೂ ಅಕ್ಕಿ ಬೇಳೆ ಮೊದಲಾದ ಸಾಮಾನು ಸರಂಜಾಮಿಗಂತೂ ಅವ ದುಡ್ಡು ಹಾಕಲೇ ಬೇಕಿತ್ತು. ಇದಕ್ಕೆ ದುಡ್ಡು ಕೇಳಿದರೆ ಪೌಂಡ್ ಲೆಕ್ಕದಲ್ಲಿ ಪಾವತಿಸಲು ಅಗಾಧ ರೂಪಾಯಿ ಪರಿವರ್ತಿಸಬೇಕು ಎಂಬ ಲೆಕ್ಕಚಾರದ ಅಪ್ಪನಿಗೆ ವಿಭ್ರಾಂತಿ ಮೂಡಿಸದಿರಲೆಂದೇ ಶ್ರೀನಿಧಿ ಪಾರ್ಟ್ ಟೈಮ್ ಕೆಲಸಕ್ಕೂ ಸೇರಿಕೊಂಡ. ಯೂನಿವರ್ಸಿಟಿಯ ಲೈಬ್ರರಿಯಲ್ಲಿ ಎಲ್ಲರೂ ಹೆಕ್ಕಿ ತಂದು ಓದಿ ಹಾಗೇ ಬಿಟ್ಟು ಹೋದ ಪುಸ್ತಕಗಳನ್ನು ಮತ್ತೆ ಅದರ ರ್‍ಯಾಕಿಗೆ ಜೋಡಿಸುವ ಕೆಲಸ ಅದು. ತನ್ನ ಓದಿನ ನಂತರ ತಾನು ತಂದ ಪುಸ್ತಕವನ್ನು ಮತ್ತೆ ಅದೇ ಜಾಗಕ್ಕೆ ಮರಳಿಸುವಂತೆ ಉಳಿದವರ ಪುಸ್ತಕವನ್ನೂ ಮರಳಿಸಿದರೆ ಸಿಗುವ ಸಂಬಳ ಶ್ರೀನಿಧಿಯ ವಾರದ ಖರ್ಚು ಕಳೆದೂ ಉಳಿಯುತ್ತಿತ್ತು! ವಾರಾಂತ್ಯದ ಯಾವುದೇ ಸ್ನೇಹಕೂಟ ಪಾರ್ಟಿಗಳಿಗೆ ಹೋಗದೆ ರೂಮಿನಲ್ಲೇ ರುಚಿಯಾದ ಅಡುಗೆ ಮಾಡಿಕೊಳ್ಳುತ್ತಿದ್ದ ಶ್ರೀನಿಧಿಯ ಖಾಯಂ ಸಹವರ್ತಿ ವಿಲಿಯಂನೇ. ಅವನಿಗಾಗಿ ಹೆಚ್ಚು ಖಾರ ಹಾಕದೇ, ಗರಂ ಮಸಾಲೆ ಉಪಯೋಗಿಸದೇ ಅಡುಗೆ ಮಾಡುತ್ತಿದ್ದ. ಶ್ರೀನಿಧಿಯ ಪಾಕ ಸವಿಯಲೆಂದು ವಿಲಿಯಂನೇ ಕರೆತಂದ ಅತಿಥಿ ಈ ಕ್ಯಾಥರೀನ್.

ಶ್ರೀನಿಧಿಯ ಪಾಕ ಪ್ರಾವೀಣ್ಯತೆಯನ್ನು ಮೆಚ್ಚಿ ಹೊಗಳುವ, ಅವನು ಬಡಿಸಿದ್ದನ್ನೆಲ್ಲಾ ಅಪ್ಪಟ ಭಾರತೀಯರಂತೆ ಬರಿಗೈಯಲ್ಲಿ ಕಲಸಿ ತಿನ್ನುವ, ಬೆರಳುಗಳನ್ನು ಚೀಪಿ ಚೀಪಿ ಆಸ್ವಾದಿಸುವ ಕ್ಯಾಥರೀನ್ ಆಸ್ಟ್ರೇಲಿಯಾದ ಸಿಡ್ನಿಯಿಂದ ಬಂದವಳಾದರೂ ನೆರೆಯ ತೈವಾನ್ ಮೂಲದವಳು. ಅವಳ ತಾಯಿಯ ತವರಾದ ತೈವಾನ್ ಅವಳಿಗೆ ಮುಖ ಚಹರೆಯನ್ನು, ಅದರದೇ ಉಚ್ಚಾರದ ಮಾತುಗಾರಿಕೆಯನ್ನೂ ಕೊಟ್ಟಿತ್ತು. ಅಂತಹುದೇ ಉಚ್ಚಾರದಲ್ಲಿ ಡೇಟಿಂಗ್‌ಗೆ ಕರೆದಾಗ ಶ್ರೀನಿಧಿ ಗಲಿಬಿಲಿಯಾಗಿದ್ದಷ್ಟೇ ಅಲ್ಲ, ಗೊಂದಲಕ್ಕೂ ಬಿದ್ದಿದ್ದ. ಅವನ ಗೊಂದಲ ತಿಳಿಗೊಳಿಸಿದ್ದು ಕ್ಯಾಥರೀನೇ!

ಆದದ್ದಾಗಲಿ ಡೇಟಿಂಗ್ ಹೋಗುವುದೇ ಸರಿ ಎಂಬ ನಿಲುವು ಶ್ರೀನಿಧಿಯಲ್ಲಿ ಮೂಡಲು ಬಹಳಷ್ಟು ಸಲಹೆ ನೀಡಿ ಶ್ರಮಪಟ್ಟಿದ್ದು ವಿಲಿಯಂ. ಇವ ಬರಲು ಒಪ್ಪಿದ್ದೇ, ಎರಡು ದಿನದ ಆ ಪುಟ್ಟ ಪ್ರವಾಸಕ್ಕಾಗಿ ಅಗಾಧವಾದ ಸಿದ್ಧತೆಗಳು ಆರಂಭವಾಗಿದ್ದವು. ಇವರಿದ್ದ ನಾಟ್ಟಿಂಗ್‌ಹ್ಯಾಮ್‌ನಿಂದ ಒಂದು ತಾಸಿನಷ್ಟು ಪ್ರಯಾಣದ ದೂರದಲ್ಲಿದ್ದ 'ಬ್ರೆಕ್ ಹಿಲ್ ರೋಡ್' ಎಂಬ ಪುಟ್ಟ ಪಟ್ಟಣವೇ ಪ್ರವಾಸದ ಸ್ಥಳ. ಇಂಗ್ಲೆಂಡ್‌ನ ಪೂರ್ವ ಮಿಡ್ ಲ್ಯಾಂಡ್‌ನಲ್ಲಿನ ಆ ಪ್ರದೇಶ ಕ್ಯಾಥರೀನ್‌ಳ ಆಯ್ಕೆ. ಪ್ರವಾಸ, ವಸತಿಯ ಸಿದ್ಧತೆ ಆಕೆ ಮಾಡತೊಡಗಿದ್ದರೆ ವಿಲಿಯಂ ಇವನ ಲಗೇಜ್ ಸಿದ್ಧಪಡಿಸಿ ಕೊಟ್ಟಿದ್ದ! ಉದ್ದನೆಯ ಬೆಚ್ಚಗಿನ ಕೋಟ್, ಕೊರಳ ಸುತ್ತುವ ಉಣ್ಣೆಯ ಮಫ್ಲರ್, ಉಣ್ಣೆಯ ಸ್ವೆಟರ್, ಮಂಜು ಒಳ ಹೋಗದಂತೆ ಎತ್ತರದ ಬೂಟುಗಳು, ಮೇಲೊಂದು ಇಂಗ್ಲಿಷ್ ಮೆನ್ ಹ್ಯಾಟ್! ಶ್ರೀನಿಧಿ ಡ್ರೆಸ್ ಮಾಡಿಕೊಂಡು ಲಗೇಜ್ ಹಿಡಿದು ನಿಂತಾಗ ಕರೆದೊಯ್ಯಲು ಬಂದ ಕ್ಯಾಥರೀನ್‌ಗೇ ಗುರುತು ಸಿಕ್ಕಿರಲಿಲ್ಲ. ಒಂದು ತಾಸಿನ ಬಸ್ ಪ್ರಯಾಣದ ನಂತರ ಬ್ರೆಕ್ ಹಿಲ್ ತಲುಪಿ, ಮೊದಲೇ ನಿಗದಿಯಾಗಿದ್ದ ವಸತಿ ಹೊಕ್ಕಾಗ ಶ್ರೀನಿಧಿ ನವಿರಾಗಿ ಕಂಪಿಸತೊಡಗಿದ್ದ!

'ಜರ್ನಿ ಮಾಡಿದ ನಂತರ ಒಂದು ಸ್ನಾನ ಮಾಡಿಬಿಡಬೇಕು. ಆಗಲೇ ಫ್ರೀ' ಎಂದೆನ್ನುತ್ತಾ ಶ್ರೀನಿಧಿಯನ್ನ ಬಲವಂತದಿಂದ ಸ್ನಾನಕ್ಕೆ ಕಳಿಸಿದ ಕ್ಯಾಥರೀನ್ ಸ್ವಲ್ಪ ಹೊತ್ತಿನಲ್ಲೇ ತಾನೂ ಸ್ನಾನಕ್ಕೆ ತಯಾರಾಗಿ ಬಾತ್ರೂಂ ಹೊಕ್ಕು 'ಲೆಟ್ ಅಸ್ ಹ್ಯಾವ್ ಬಾತ್ ಟುಗೆದರ್' ಎಂದಾಗ ಶೀನಿಧಿಯ ಕಂಪನ ನಡುಕವಾಗಿ ಪರಿವರ್ತಿತವಾಗಿತ್ತು! ಅದನ್ನು ತೋರಗೊಡದೇ, ಗಲಿಬಿಲಿಯಲ್ಲಿ ಒದ್ದೆ ಮೈ ಒರೆಸದೇ ಟವೆಲ್ ಸುತ್ತಿಕೊಂಡ. ಎದೆಯಿಂದ ನಡು ಭಾಗದವರೆಗೆ ಮಾತ್ರ ಟವೆಲ್ ಸುತ್ತಿಕೊಂಡಿದ್ದ ಅವಳನ್ನು ಅಪಾದ ಮಸ್ತಕ ನೋಡಿದ. ಮಂಗೋಲಿಯನ್ ಮುಖ ಚಹರೆಯ ಸಣ್ಣ ಕಣ್ಣು, ದೊಡ್ಡ ಆಲೆಯ ಕಿವಿ,